# ಖನ್ನೂರ ವಿದ್ಯಾನಿಕೇತನ ಸ್ಕೂಲ್, ರಾಣೆಬೆನ್ನೂರ

## ಮೊದಲನೆಯ ಆವರ್ತಕ ಪರೀಕ್ಷೆ ಆಗಸ್ಟ್ -೨೦೨೦

ತರಗತಿ : ೭ ವಿಷಯ : ದ್ವಿತೀಯ ಭಾಷೆ ಕನ್ನಡ ಅಂಕಗಳು : ೨೦

---

**(Use KANNADA H W Note Book to ANSWER)**

ವಿಭಾಗ – ಎ (ವಾಚನ ಮತ್ತು ಗ್ರಹಿಕಾ ಕೌಶಲ): ೪ ಅಂಕಗಳು

೧) ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

ಊರ ಮುಂದಿನ ಬಯಲಿನಲ್ಲಿ ಮಕ್ಕಳ ಕಲರವವೋ ಕಲರವ. ಅವರ ನೋಟ ಆಗಸದ ಕಡೆಗೆ. ಅರೆರೆ! ಅದೋ ನೋಡಿ! ಮೇಲೆಕೆಳಗೆ ಲಾಗ ಹೊಡೆಯುವ ಚೆ'ಲುವಿನ ತಾರೆಗಳು! ಪಟಪಟ ಗಾಳಿಪಟಗಳು. ಅಬ್ಬಬ್ಬಾ! ಬಗೆಬಗೆಯ ಪಟಗಳವು, ಬುಗುಟಿ ಪಟ, ಹನುಮನ ಪಟ, ತಾರಾ ಪಟ, ಆಯತ ಪಟ, ಚೌಕದ ಪಟ, ಕೋಲ ಪಟ, ಗಾಳಿಯ ಪಟ, ಹಾವಿನ ಪಟ, ಹೀಗೆ ಸಾಲುಸಾಲಾಗಿ ಹಾರುವ ಸರಣಿ ಪಟಗಳು. ಆಗಸಕೆ ದಾಳಿಯಿಡುವ ಪಟಗಳೋ ನೂರಾರು. ರಂಗುಗಳೋ ಹಲವಾರು. ಕೆಂಪು, ಕೇಸರಿ, ಹಸಿರು, ನೀಲಿ, ಹಳದಿ ರಂಗುರಂಗಿನ ರಂಗೋಲಿ ಮೂಡಿಸಿವೆ. ಗಾಳಿಪಟಗಳ ರೂಪು-ರಂಗುಗಳು ಸಾವಿರ ತರಹ. ಆದರೆ ಅವುಗಳಿಗೆ ಹಾಕುವ ದಾರದ ಗಂಟು ಒಂದೇ ತರಹ. ಮೇಲೆ ಮೇಲೆ ಹಾರಲು ಪಟಗಳಿಗೆ ಬೇಕು ಬಾಲಂಗೋಚಿ. ಅದು ಸಮತೋಲನ ಬಾಲಂಗೋಚಿ.

ಆಗಸದಿ ಬಳುಕುವ ಈ ಪಟಗಳು, ಕೆಲವರಿಗೆ ಮಾವು ತರಲು ಆಗಸಕೆ ಹಾರಿದ ಬಾಲಹನುಮನಂತೆ ಕಾಣುವವು. ಹಲವರಿಗೆ ನೀಲಿ ಸಾಗರದಲಿ ಈಜುವ ರಂಗುರಂಗಿನ ಮೀನುಗಳಾಗಿ ಕಾಣುವವು. ತಿಳಿದವರಿಗೆ ಮಾನವರ ಸಂದೇಶವನ್ನು ದೇವಲೋಕಕ್ಕೆ ಸಾಗಿಸುವ ರಾಯಭಾರಿಗಳಂತೆ ಕಾಣುವವು. ವಿಧವಿಧ ರಂಗು, ಬಗೆಬಗೆ ಆಕಾರದ ಪಟಗಳು, ನೀಲಿ ನಭಕೆ ರಂಗು ಬಳಿಯುವ ಮಕ್ಕಳ ಆಟವಿದು. ಮೇಲಾಟದಲಿ ಸಂತಸಪಡುವ ತುಂಬಾಟವಿದು. ಮನ ಸೆಳೆಯುವ ನೋಟವಿದು.

ಪ್ರಶ್ನೆಗಳು:
೧) ಮಕ್ಕಳು ಗಾಳಿಪಟ ಹಾರಿಸಲು ಎಲ್ಲಿ ಸೇರಿದ್ದರು? ೧
೨) ವಿವಿಧ ಬಗೆಯ ಗಾಳಿಪಟಗಳು ಯಾವುವು? ೧
೩) ಆಗಸದಲ್ಲಿ ಕಂಡುಬಂದ ರಂಗುರಂಗಿನ ಪಟಗಳು ಯಾವುವು? ೧
೪) ಗಾಳಿಪಟಗಳಿಗೆ ಬಾಲಂಗೋಚಿ ಏಕೆ ಬೇಕು? ೧

ವಿಭಾಗ -ಬಿ (ಬರವಣಿಗೆಯ ಕೌಶಲ) : ೩ ಅಂಕಗಳು

೨) ನಿಮ್ಮ ಮನೆಯ ಬಳಿ ಸಾರ್ವಜನಿಕ ಗ್ರಂಥಾಲಯವೊಂದನ್ನು ಸ್ಥಾಪಿಸಲು ಕೋರಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ. ೩

ವಿಭಾಗ – ಸಿ (ಅನ್ವಯಿಕ ವ್ಯಾಕರಣ) : ೬ ಅಂಕಗಳು

೩) ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ:
೧) ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: ೪
೧) ಗುರುವನ್ನು ೨) ಪುಸ್ತಕವನ್ನು ೩) ಮೈದೊಳೆ ೪) ಬಲ್ಲೆನೆಂದು
೨) ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ: ೧
೧) ಅಪರಾಧ ೨) ಸತ್ಯ
೩) ಈ ಪದಗಳ ವಚನ ಬದಲಿಸಿ ಬರೆಯಿರಿ: ೧
೧) ಪುಸ್ತಕ ೨) ಮರ

ವಿಭಾಗ – ಡಿ (ಪಠ್ಯಗಳ ಅಧ್ಯಯನ) : ೭ ಅಂಕಗಳು

೧) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ:
೧) ಯಾರೇ ಏನೇ ಮಾಡಿದರೂ ಗಿಡಮರ ಏನು ಮಾಡುತ್ತವೆ? ೧
೨) ಕಡಲುಕ್ಕುವ ಚೇತನ ಎಲ್ಲಿ ಕಾಣಬರುತ್ತದೆ? ೧
೩) ಅದು ಇದು ಎಣಿಸದಿರುವುದು ಯಾವುದು? ೧

೨) ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:
೧) ಬೆಳೆದು ನಿಂತ ಗಿಡಮರ ಹೇಗಿವೆ? ೨
೨) ಯಾರ ಮಾತಿನಂತೆ ಮನ ಇಲ್ಲ? ಏಕೆ? ೨

*****

**SEND THE PHOTO or PDF of this ANSWER SHEET to HANUMANTAPPA M K Sir on 8197183534 or 8660443218**